doc-406
T.P-2

(1)

R No KRNN 12

25 - 11 - 1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
- For Influential Publicity -

ಪ್ರಕಾಶಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ವಾರಸ್ಯಾರಸ ಎಂ. ಎಸ್. ಕೃಷ್ಣರಾವ್ 3 ಪು.

ಮೈಸೂರು ನಗರ ಬಗೆ ಗಮನದ ಆಶಾಸನೆ

ಲ ಂ ಛ ನ

ಪ ತಿ ಭ ಕ್ತಿ

ಕಲ್ಕತ್ತಾದ ಆಲೋಪಿಬಾಗ್‌ನಲ್ಲಿ 40 ವರ್ಷಗಳ ಹಿಂದೆ ಚಂದ್ರ ಕಿಶೋರಿ ಜ್ಞಾ ಎಂಬ ಒಬ್ಬ ಯೌವನಸ್ಥನು ಒಬ್ಬ ನಿವೃತ್ತ ಮ್ಯಾಜಿಷ್ಟ್ರೇಟ್ ಗಣ್ಯ ವ್ಯಕ್ತಿಯ ಲ್ಲಿ ಕೆಲಸಕ್ಕಿದ್ದು ಅವನ ಅಲಹಾಬಾದು ಮನೆಯ ಆಡಳಿತಗಾರನಾಗಿದ್ದನು.

ಹೀಗಿರಲು, ಒಂದು ಸಮಯದಲ್ಲಿ ಕೆಲವರು ದುಷ್ಕರ್ಮಿಗಳು ಒಬ್ಬನನ್ನು ಕೊಲೆ ಮಾಡಿ, ಶವವನ್ನು ಮೇಲ್ಕಂಡ ಮನೆಯ ಗೇಟಿನ ಹತ್ತಿರ ಹಾಕಿದರು; ತನ್ಮೂಲಕ ತಾವು ತಪ್ಪಿಸಿಕೊಳ್ಳುವುದೂ, ಆ ಮನೆಯವರನ್ನು ಈ ಅಪರಾಧದಲ್ಲಿ ಸಿಕ್ಕಿಹಾಕುವುದೂ ಅವರ ಆಶಯವಾಗಿತ್ತು ; ಜೊತೆಗೆ ಅವರು ಪೋಲೀಸರಿಗೆ, ಮನೆಯಲ್ಲಿ ಹಾಸಿ ಸುತ್ತಿರುವ ಮನೆ ನಾಲೀಕರ ಸಂಬಂಧೀಕ ವೈದ್ಯಜೀ, ಈ ಆಡಳಿತಗಾರ ಮತ್ತು ಅವರ ಡ್ರೈವರು ಕೊಲೆ ನಡೆಸಿರುವುದಾಗಿ ತಿಳಿಸಿದರು.

ಪೋಲೀಸರು ಕೂಡಲೇ ಆ ಮೂವರನ್ನೂ ದಸ್ತಗಿರಿ ಮಾಡಿ ಖೂನಿ ಅಪಾದನೆ ಹೊರಿಸಿದರು ; ಅತ್ಯಂತ ಕಷ್ಟದಿಂದ ವೈದ್ಯಜೀ ಜಾಮೀನಿನ ಮೇಲೆ ಬಿಡುಗಡೆಯಾದನು. ಆದರೆ ಈ ಬಡಪಾಯಿ ಆಡಳಿತಗಾರನು ಅನೇಕ ದಿನಗಳು ಕೈಕೋಳಗಳೊಡನೆ, ಸೊಂಟಕ್ಕೆ ಹಗ್ಗ ಜಿಗಿಯಲ್ಪಟ್ಟು, ಜೈಲಿನಲ್ಲಿ ಇರಬೇಕಾಯಿತು. ಈ ಭೀಕರ ವಾರ್ತೆಯು ಅವನ ಗ್ರಾಮಕ್ಕೆ ತಿಳಿಸಲ್ಪಟ್ಟಿತು. ಇದನ್ನು ಕೇಳಿದ ಅವನ ಪತ್ನಿ ಮೂರ್ಛೆ ಹೋದಳು. ಸ್ವಲ್ಪ ಹೊತ್ತಿನ ಮೇಲೆ ಜ್ಞಾನ ಬಂದಾಗ ತೀಕ್ಷ್ಣವಾಗಿಯೂ, ಧ್ಯಾನಾಸಕ್ತಳಾಗಿಯೂ ಕಂಡುಬಂದಳು.

ನಂತರ ಅವಳು ತನ್ನ ಕೆಲವು ನಂಟರಿಷ್ಟರೊಡನೆ, ಶ್ರೀ ಕಲ್ಯಾಣಿದೇವಿ ದೇವಸ್ಥಾನಕ್ಕೆ ಒಂದು ಸಣ್ಣ ಹರ್ಕದ ಚೂರಿನೊಡನೆ ಹೋದಳು. ದೇವಾಲಯದಲ್ಲಿ ದೇವರ ಮುಂದೆ ಅಡ್ಡಬಿದ್ದು, ಅಳುತ್ತಾ, "ಓ ತಾಯಿ ! ನಿನ್ನ ಅಪಾರ ಅನುಗ್ರಹದಿಂದ ನಾನು ಸೌಭಾಗ್ಯವತಿಯಾಗಿ, ಪ್ರಾಮಾಣಿಕ ಮತ್ತು ಸತ್ಯವಂತ ಗಂಡನನ್ನು ಪಡೆಯುವ ಅದೃಷ್ಟ ಹೊಂದಿದೆ ; ಈಗ ನೀನು ನನ್ನ ಪತಿಗೆ ನೇಣುಹಾಕಲಿದ್ದು ನಾನು ವಿಧವೆಯಾಗಬೇಕೆಂಬ ಇಚ್ಛೆಯಿರುವೆಯಾ ? ಓ ತಾಯಿ ! ನಿನ್ನ ಇಚ್ಛೆ ಇದ್ದಂತಾಗಲಿ ; ಈಗ ನಾನು ಈ ಹರ್ಕದ ಚೂರಿನಿಂದ, ನಿನ್ನ ಮುಂದೆ ನನ್ನ ಗಂಡನು ನನಗೆ ಸಂಪ್ರದಾಯವಾಗಿ ಇಟ್ಟಿದ್ದ ಕುಂಕುಮವನ್ನು ಅಳಿಸಿಬಿಡುತ್ತೇನೆ ; ಇಂದಿನಿಂದ ನಾನು ವಿಧವೆಯೆಂದು ತಿಳಿದುಕೊಳ್ಳುತ್ತೇನೆ ; ಆದರೆ ನಿನ್ನ ಅಪಾರ ಕರುಣೆಯಿಂದ, ನನ್ನ ಗೌರವಾನ್ವಿತವಾಗಿ ಬಿಡುಗಡೆಯಾಗಿ ನನ್ನಲ್ಲಿಗೆ ಬಂದರೆ ಆಗ ಮೂತ್ರ ನಾನು ನಿನ್ನಲ್ಲಿಗೆ ಸೌಭಾಗ್ಯವತಿಯ ಉಡುಪಿನಿಂದ ಬರುತ್ತೇನೆ ಮತ್ತು ನನ್ನ ಗಂಡನ ಕೈಯಿಂದ ಕುಂಕುಮ ಇಡಿಸಿಕೊಳ್ಳುತ್ತೇನೆ' ಎಂದು ಹೇಳಿ ಆ ಪತಿಭಕ್ತಿಪರಾಯಣೆ ಮಹಿಳೆಯು ತನ್ನ ಮನೆಗೆ ವಾಪಸ್ಸಾಗಿ ವಿಧವೆಯಾಗಿ ಕಾಲಕಳೆಯುತ್ತಾ, ತನ್ನ ಗಂಡನು ಸುರಕ್ಷಿತವಾಗಿ ವಾಪಸ್ಸಾಗಲೆಂದು ದೇವಿಗೆ ಅನುದಿನವೂ ಮೌನವಾಗಿ ಪ್ರಾರ್ಥನೆ ಮಾಡುತ್ತಿದ್ದಳು.

ಕಡೆಗೆ ಸತ್ಯ ಹೊರಬಿದ್ದಿತು ; ಚಂದ್ರಕಿಶೋರಿ ನಿರಪರಾಧಿಯೆಂದು ಗೌರವಾನ್ವಿತವಾಗಿ ಬಿಡುಗಡೆ ಮಾಡಲ್ಪಟ್ಟನು; ಅವನು ಮನೆಗೆ ಬಂದನಂತರ ಪತಿಪತಿಯರು ದೇವಾಲಯಕ್ಕೆ ಹೋದರು ; ದೇವಿಯ ಮುಂದೆ ಚಂದ್ರಕಿಶೋರಿ ತನ್ನ ಹೆಂಡತಿಯ ಹಣೆಗೆ ಕುಂಕುಮವಿಟ್ಟನು ; ನಂತರ ಇಬ್ಬರೂ ಒಂದುಗೂಡಿದರು (ಟ್ರೂತ್)

ಕಾವೇರಿ ನೀರು ಸಮಸ್ಯೆ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್ ರವರು ಕಾವೇರಿ ನೀರಿನ ಸಮಸ್ಯೆ ಬಗ್ಗೆ ತಾ॥ 27 ರಂದು ವಿರೋಧ ಪಕ್ಷಗಳ ನಾಯಕರೊಡನೆ ಚರ್ಚಿಸುವರು

★

ವಾರ್ತಾ ಇಲಾಖೆಯೊಡನೆ ಸಹಕರಿಸಲು

ಮೈಸೂರು— ಆಡಳಿತ ತರಬೇತಿ ಸಂಸ್ಥೆಯಲ್ಲಿ ನಡೆದ ಒಂದು ವಾರದ ಸಾರ್ವಜನಿಕ ಸಂಪರ್ಕ ಮತ್ತು ಸಾಮೂಹಿಕ ಪ್ರತೀಕ ಸಾಕ್ಷರತ್ವವಚನ ಸಮಾರೋಪ ಭಾಷಣದಲ್ಲಿ ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖಾ ಡೈರೆಕ್ಟರ್ ಶ್ರೀ ಬಿ. ಜಿ. ಕುಲಕರ್ಣಿಯವರು— ಹಲವು ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗಳ ಚಟುವಟಿಕೆಗಳಿಗೆ ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದಲ್ಲಿ ವಿಸ್ತಾರವಾದ ಪ್ರಚಾರಕ್ಕಾಗಿ ವಾರ್ತಾ ಇಲಾಖೆಯೊಡನೆ ಸೇರಲೂ ಮತ್ತು ಸಹಕರಿಸಲೂ ಕರೆ ಇತ್ತರು.

★

ಫ್ಲೀವ್ಸ್ ಇಂಡಿಯಾ

ಮೈಸೂರು— ಚಿಕ್ಕ ಪ್ರಮಾಣದ ಕೈಗಾರಿಕೆಯ ಫ್ಲೀವ್ಸ್ ಇಂಡಿಯಾ ಸಂಸ್ಥೆಯನ್ನು ಉದ್ಘಾಟಿಸುತ್ತಾ, ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್ ರವರು. ಜಯ ಪ್ರಕಾಶರ ಚಳವಳಿಯನ್ನು ಟೀಕಿಸಿ, ದೇಶದ ಯುವಕರು ರಚನಾತ್ಮಕ ಮತ್ತು ರಾಷ್ಟ್ರ ಪ್ರಗತಿ ಚಳವಳಿಗಳಲ್ಲಿ ಭಾಗವಹಿಸಬೇಕೆಂದು ಹೇಳಿದರು — ಅಧ್ಯಕ್ಷತೆ ವಹಿಸಿದ್ದ ಮಾಜಿ ಮಂತ್ರಿ ಶ್ರೀ ಅಜೀಜ್ ಸೇಟ್ ರವರು, ಮೈಸೂರಿನ ಅಭಿವೃದ್ಧಿಗೆ ಒಂದು ಸಮನ್ವಯ ಸಮಿತಿ ನೇಮಿಸಲು ಒತ್ತಾಯ ಮಾಡಿದರು; ನಗರದ ಸುತ್ತಮುತ್ತ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುತ್ತಿದ್ದು ಇಪತಿಂದ ನಗರದ ಸೌಂದರ್ಯ ಹಾಳಾಗುವ ಸಂಭವವಿದೆಯೆಂದು ಹೇಳಿದರು.

★

ಜೆ ಪಿ ಯವರ ಹೇಳಿಕೆ

ನವದೆಹಲಿ— ತಮ್ಮ ಚಳವಳಿ ನಡೆಸಲು ವಿವಿಧ ರಾಜಕೀಯ ಪಕ್ಷಗಳನ್ನು ಒಂದುಗೂಡಿಸುವುದು ತಮಗೆ ಇಚ್ಛೆಯಿಲ್ಲವೆಂದೂ ಜಯಪ್ರಕಾಶರು ವಿದ್ಯಾರ್ಥಿ ಸಮ್ಮೇಳನದಲ್ಲಿ ಹೇಳಿದರು — ದೇಶಾದ್ಯಂತ ಪೂರ್ಣ ಕ್ರಾಂತಿಗೆ ಯುವಕ ಮತ್ತು ಜನತಾ ಶಕ್ತಿ ಅವಶ್ಯಕವೆಂದೂ, ರಾಜಕೀಯ ಪಕ್ಷಗಳಿಂದ ಇದು ಸಾಧ್ಯವಿಲ್ಲವೆಂದೂ ಹೇಳಿದರು.

★

ಸನ್ಮಾನ ಸಮಾರಂಭ

ಮೈಸೂರು— ನಗರದ ಸಂಪಾದಕರ ಸಂಘವು ರಾಜ್ಯ ಪ್ರಶಸ್ತಿ ವಿಜೇತರಾದ "ಸಾಧ್ವಿ" ಸಂಪಾದಕರು ಶ್ರೀ ಆಗರಂ ರಂಗಯ್ಯನವರನ್ನು ಶನಿವಾರ ಸನ್ಮಾನಿಸಿತು — ವಾರ್ತಾ ಮತ್ತು ಪ್ರಚಾರ ಇಲಾಖಾ ನಿರ್ದೇಶಕರು ಶ್ರೀ ಬಿ. ಜಿ. ಕುಲಕರ್ಣಿಯವರು ಆಗಮಿಸಿದ್ದು ವಿಜೇತರನ್ನು ಅಭಿನಂದಿಸಿದರು.

●

ಮೈಸೂರು ನಗರ ಬಗ್ಗೆ ಸೂಕ್ತ ಗಮನ

ಮೈಸೂರು— ಕೈಗಾರಿಕೆಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಮೈಸೂರು ನಗರದ ಅವಶ್ಯಕತೆ ಬಗ್ಗೆ ಸೂಕ್ತ ಗಮನ ಕೊಡುವುದಾಗಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ನಾಗರೀಕ ಕಲ್ಯಾಣ ಸಂಘವನ್ನು ಉದ್ಘಾಟಿಸುತ್ತಾ ಹೇಳಿದರು — ನಗರಾಭಿವೃದ್ಧಿ ಮಂಡಲಿ ಅಧ್ಯಕ್ಷ ಶ್ರೀ ಕೆಂಗೆ ಗೌಡರವರು ಸಭಿಕರಿಗೆ ಸ್ವಾಗತ ಕೋರಿದರು — ಮಾಜಿ ಮಂತ್ರಿ ಶ್ರೀ ಅಜೀಜ್‌ಸೇಟ್ ರವರು ಅಧ್ಯಕ್ಷತೆ ವಹಿಸಿದ್ದರು.

★

ಕಾಂಗ್ರೆಸ್ ಸದಸ್ಯರ ಸಸ್ಪೆಂಷ್

ಹುಬ್ಬಳ್ಳಿ— ನಗರ ಸಭಾ ಕಳೆದ ಮೀಟಿಂಗಿನಲ್ಲಿ ಮೇಯರ್‌ರರು 6 ಮಂದಿ ಕಾಂಗ್ರೆಸ್ ಸದಸ್ಯರನ್ನು ಸಸ್ಪೆಂಡು ಮಾಡಿದರು.

ಹಿಂದೂಸಾಗರದಲ್ಲಿ

ಬೊಂಬಾಯಿ— ಹಿಂದೂಸಾಗರದಲ್ಲಿ ಹೊರಗಿನ ದೊಡ್ಡ ಶಕ್ತಿಗಳು ತಮ್ಮ ಚಟುವಟಿಕೆಗಳನ್ನು ನಿಲ್ಲಿಸಬೇಕೆಂದು ರಕ್ಷಣಾ ಮಂತ್ರಿ ಶ್ರೀ ಚವಣರು ಹೇಳಿದರು.

ಜೋತಾ ಬಜೆಟ್ಟೇ

ನವದೆಹಲಿ— ಮುಂದಿನ ಬಜೆಟ್‌ಗೆ ಇನ್ನೂ ಮೂರು ತಿಂಗಳುಗಳಿದ್ದರೂ ಅದು ರೂ. 700 ಕೋಟಿ ಜೋತಾ ಬಜೆಟ್ ಆಗುವ ಸಂಭವವಿದೆ ಎನ್ನಲಾಗಿದೆ.

ಕರ್ನಾಟಕ ಮಂತ್ರಿಮಂಡಲ ॥

ಬೆಂಗಳೂರು— ಮಂತ್ರಿಮಂಡಲಕ್ಕೆ ಮತ್ತಿಬ್ಬರು ಸದಸ್ಯರನ್ನು ಸೇರಿಸಿಕೊಳ್ಳಲಾಗುವುದೆಂದು ಗೊತ್ತಾಗಿದೆ.

ರೇಡಿಯೋ

ಮಧುರೈ— ಅಖಿಲ ಭಾರತ ರೇಡಿಯೋ ಸರಕಾರದ ಪರ ಮಾತನಾಡುವುದಾಗಿಬಿಡಿಯೆಂದು ಹಳೇ ಕಾಂಗ್ರೆಸ್ ನಾಯಕ ಶ್ರೀ ಕಾಮರಾಜ್‌ರವರು ಟೀಕಿಸಿರುವರು

ದಿನ್ಯವಾಣಿ

ತಪ್ಪನ್ನು ಸರಿಯಾಗಿ ಕಾಣುವಂತೆ ವರ್ತಿಸುವ ಜನರಿಗೆ ಈ ದಿನಗಳಲ್ಲಿ ಕೇಳಿಕೆ ಹೆಚ್ಚಾಗಿದೆ. — ಟಿರೆನ್ಸ್

★ ಕಾರವಾರ-ಗೋವಾ ಗಡಿಯಲ್ಲಿ ಕಳ್ಳಸಾಗಾಣಿಕೆಗಾರರ ತಟುವಟಿಕೆ ಹೆಚ್ಚುತ್ತಿರುವುದೆನ್ನಲಾಗಿದೆ.

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Quality Printing NearBinding

Lakshminarasimha Press

Sivarampet, Mysore-1

Protect the Cow

Help The Gorakshana

— Humanitarian Propoganda Monthly—

ವುಡ್‌ಲಾಂಡ್ಸ್ 22 11 74 ರಿಂದ

ಅಮೋಘ 3 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ 3 ಪ್ರದರ್ಶನಗಳು

ಅ ಪೆ ರಾ 25 11 74 ರಿಂದ

ಮ ಹೇ ಶ್ವ ರಿ

4 ದಿವಸಗಳು

ಜೆಮಿನಿ ಗಣೇಶ — ಸಾವಿತ್ರಿ ಇವರ ಅಭಿನಯದಿಂದ ಕೂಡಿದ
ಅನೋಘ ತಮಿಳು ಚಿತ್ರ

ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore